186(369) ಶ್ರೀ ಸಿದ್ದು ಸಾವದಿ (ಜಮಖಂಡಿ)

ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಜಮಖಂಡಿ ತಾಲ್ಲೂಕಿನಲ್ಲಿ ನಾಲ್ಕಾರು ಹಳ್ಳಿಗಳಲ್ಲಿ ಪಶುಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸಲು ಪ್ರಸ್ತಾವನೆಗಳನ್ನು ಸಲ್ಲಿಸಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದಲ್ಲಿ, ಕೈಗೊಂಡಿರುವ ಕ್ರಮವೇನು?

ಇ) ತಾಲ್ಲೂಕಿನಲ್ಲಿ ಹಾಲಿ ಇರುವ ಚಿಕಿತ್ಸಾ ಕೇಂದ್ರಗಳೆಷ್ಟು? ಸರ್ಕಾರದ ನಿಯಮಾನುಸಾರ ಜಾನುವಾರುಗಳ ಸಂಖ್ಯೆಗೆ ಅನುಗುಣವಾಗಿ ಇನ್ನು ಎಷ್ಟು ಕಡೆ ಪ್ರಾರಂಭಿಸಲಾಗುವುದು?

ಈ) ಇಲಾಖೆಯ ಕಟ್ಟಡಗಳು ಶಿಥಿಲಗೊಂಡಿದ್ದು, ಈ ಕಟ್ಟಡಗಳ ದುರಸ್ಥಿಗಾಗಿ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ರೇವೂ ನಾಯಕ್ ಬೆಳಮಗಿ

ಅ) ಹೌದು ಬಂದಿದೆ.

ಜಮಖಂಡಿ ತಾಲ್ಲೂಕಿನ ಖಾಜಬೀಳಗಿ, ಸಾಸಲಹಟ್ಟಿ, ಮದರಕಂಡಿ, ಲಿಂಗನೂರು, ಹುನ್ನೂರ, ಕಲಬೀಳಗಿ ಮತ್ತು ಹಿರೆಪಡಸಲಗಿ ಗ್ರಾಮಗಳಲ್ಲಿ ನೂತನ ಪಶುಚಿಕಿತ್ಸಾಲಯ ಪ್ರಾರಂಭಕ್ಕಾಗಿ ಪ್ರಸ್ತಾವನೆಗಳನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ)ಡಾ: ಡಿ.ಎಂ.ನಂಜುಡಪ್ಪರವರ ಪ್ರಾದೇಶಿಕ ಅಸಮತೋಲನಾ ವರದಿಯ ಆಧಾರದ ಮೇಲೆ ಜಮಖಂಡಿ ಮುಂದುವರಿದ ತಾಲ್ಲೂಕು ಆಗಿದ್ದು, ಒಟ್ಟು 1,18,599 ಜಾನುವಾರು ಘಟಕಗಳಿದ್ದು, ಪ್ರತಿ 5000

ಜಾನುವಾರು ಘಟಕಗಳಿಗೆ ಒಂದು ಪಶುಚಿಕಿತ್ಸಾಲಯದಂತೆ 24 ಪಶು ವೈದ್ಯ ಸಂಸ್ಥೆಗಳು ಇರಬೇಕಿತ್ತು. ಆದರೆ ಈಗಾಗಲೇ 25 ಪಶು ವೈದ್ಯ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಆದ್ದರಿಂದ ಪಶು ಚಿಕಿತ್ಸಾಲಯದ ಕೊರತೆ ಇಲ್ಲದ ಯಾವುದೇ ತಾಲ್ಲೂಕುಗಳಲ್ಲಿ ಹೊಸ ಪಶು ಚಿಕಿತ್ಸಾಲಯ ಪ್ರಾರಂಭಿಸಲು ಇನ್ನೂ ಕಾಲ ನಿಗದಿಗೊಳಿಸಲಾಗಿಲ್ಲ.

ಜಮಖಂಡಿ ತಾಲ್ಲೂಕಿನಲ್ಲಿ ಒಟ್ಟು 25 ಪಶು ವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳ ವಿವರ ಈ ಕೆಳಕಂಡಂತಿದೆ.

1.	ಪಶು ಆಸ್ಪತ್ರೆ	03
2.	ಪಶುಚಿಕಿತ್ಸಾಲಯಗಳು	09
3.	ಸಂಚಾರಿ ಪಶುಚಿಕಿತ್ಸಾಲಯಗಳು	01
4.	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು	06
5.	ಕೃತಕ ಗರ್ಭಧಾರಣಾ ಕೆಂದ್ರ	06
	ಒಟ್ಟು	**25**

ಡಾ: ಡಿ.ಎಂ.ನಂಜುಡಪ್ಪರವರ ಪ್ರಾದೇಶಿಕ ಅಸಮತೋಲನಾ ವರದಿಯ ಆಧಾರದ ಮೇಲೆ ಜಮಖಂಡಿ ಮುಂದುವರಿದ ತಾಲ್ಲೂಕು ಆಗಿದ್ದು, ಒಟ್ಟು 1,18,599 ಜಾನುವಾರು ಘಟಕಗಳಿದ್ದು, ಪ್ರತಿ 5000 ಜಾನುವಾರು ಘಟಕಗಳಿಗೆ ಒಂದು ಪಶುಚಿಕಿತ್ಸಾಲಯದಂತೆ 24 ಪಶು ವೈದ್ಯ ಸಂಸ್ಥೆಗಳು ಇರಬೇಕಿತ್ತು. ಆದರೆ ಈಗಾಗಲೇ

25 ಪಶು ವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಆದ್ದರಿಂದ ಪಶು ಚಿಕಿತ್ಸಾಲಯದ ಕೊರತೆ ಇಲ್ಲದ ಯಾವುದೇ ತಾಲ್ಲೂಕುಗಳಲ್ಲಿ ಹೊಸ ಪಶು ಚಿಕಿತ್ಸಾಲಯ ಪ್ರಾರಂಭಿಸಲು ಇನ್ನೂ ಕಾಲ ನಿಗದಿಗೊಳಿಸಲಾಗಿಲ್ಲ.

ಜಮಖಂಡಿ ತಾಲ್ಲೂಕಿನ ಪಶುಚಿಕಿತ್ಸಾಲಯ ಸಾವಳಗಿ ಮತ್ತು ಮರೆಗುದ್ದಿಯ ಕಟ್ಟಡವನ್ನು ಆರ್.ಐ.ಡಿ.ಎಫ್. ನಬಾರ್ಡ ಯೋಜನೆಯಡಿ ನಿರ್ಮಾಣ ಪ್ರಾರಂಭಿಸಲಾಗಿದೆ. ಪಶು ಆಸ್ಪತ್ರೆ, ಬನಹಟ್ಟಿ ಹಾಗೂ ಪಶು ಚಿಕಿತ್ಸಾಲಯ, ತೊದಲಬಾಗಿ ಕಟ್ಟಡಗಳ ದುರಸ್ಥಿಯನ್ನು ಪ್ರಸ್ತುತ ಸಾಲಿನ ಜಿಲ್ಲಾ ಪಂಚಾಯತ್ ಯೋಜನೆ ಲೆಕ್ಕ ಶೀರ್ಷಿಕೆಯಡಿ (ಕಟ್ಟಡ) ಕೈಗೊಳ್ಳ ಲಾಗುತ್ತದೆ. ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ನಾವಲಗಿ ಮತ್ತು ಪಶು ಆಸ್ಪತ್ರೆ, ಜಮಖಂಡಿಯ ದುರಸ್ಥಿ ಕಾರ್ಯಗಳನ್ನು ಪ್ರಕೃತಿ ವಿಕೋಪ ಪರಿಹಾರ ನಧಿ ಕಾರ್ಯಕ್ರಮದ ಅಡಿ ಕ್ರಮ ಕೈಗೊಳ್ಳಲಾಗಿದೆ.

187(370) ಶ್ರೀ ಸಿದ್ದು ಸಾವದಿ (ಜಮಖಂಡಿ)

ಮಾನ್ಯ ಆರೋಗ್ಯ ಮತ್ತು ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಜಮಖಂಡಿ ತಾಲ್ಲೂಕಿನಲ್ಲಿಯ ಜನಸಂಖ್ಯೆಗೆ ಅನುಗುಣವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮವೇನು?

ಇ) ಸರ್ಕಾರದ ನಿಯಾಮವಳಿಯ ಪ್ರಕಾರ ತಾಲ್ಲೂಕಿನಲ್ಲಿ ಇನ್ನೂ ಏಳು ಕಡೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಬೇಕಾಗಿದ್ದು ಯಾವಾಗ ಭರ್ತಿ ಮಾಡಲಾಗುವುದು?

ಈ)ಹಾಲಿ ಇರುವ ಕೇಂದ್ರಗಳಲ್ಲಿ ವೈದ್ಯರ ಕೊರತೆ ಇದ್ದಲ್ಲಿ ಯಾವಾಗ ಭರ್ತಿ ಮಾಡಲಾಗುವುದು?

ಉ)ತಾಲ್ಲೂಕಿನ ಅನೇಕ ಹಳ್ಳಿಗಳಲ್ಲಿ ಎ.ಎನ್.ಎಮ್.ಗಳು ಇರುವುದಿಲ್ಲ ವಾದ್ದರಿಂದ ಯಾವಾಗ ನೇಮಿಸಲಾಗುವುದು?